**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>**

**<u>ಕೆ.ಆರ್.ನಗರ</u>**

**<u>ಒ.ಎಸ್.40/2018</u>**

**ಪಿಡಬ್ಲ್ಯೂ-1**

**<u>ದಿನಾಂಕ 18-02-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಮುಖ್ಯ ವಿಚಾರಣೆ ಶ್ರೀ. **ಬಿ ಕೆ ಎನ್** ವಕೀಲರಿಂದ ವಾದಿ ಪರ ವಕೀಲರುಃ</u>

ನನ್ನ ಸಾಕ್ಷಿ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ಸಂಗತಿಗಳು ನನಗೆ ತಿಳಿದಿದ್ದು ಹಾಗೂ ಅವು ಸತ್ಯವಾಗಿರುತ್ತವೆ.

ಒಂದು ಆನ್ ಡಿಮ್ಯಾಂಡ್ ಪ್ರೋನೋಟ್ ಹಾಗೂ ಹಣ ಸಂದಾಯ ರಶೀದಿಯನ್ನು ನಿಪಿ 1 ಎಂದು, ನೋಟೀಸಿನ ಕಛೇರಿ ಪ್ರತಿಯನ್ನು ನಿಪಿ 2 ಎಂದು, ಅಂಚೇ ರಶೀದಿಯನ್ನು ನಿಪಿ 3 ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿಪಿ 1 ನ್ನು ತೋರಿಸಿದ್ದು ಸಾಕ್ಷಿಯು ಸದರಿ ದಾಖಲೆಗೆ ಕೃಷ್ಣೇಗೌಡ ಹಾಗೂ ಬೋರನಾಯಕ ಇವರು ಸಹಿ ಮಾಡಿದ್ದು ಸದರಿ ಸಾಕ್ಷಿದಾರರ ಸಹಿಗಳನ್ನು ಗುರುತಿಸಿದ್ದರಿಂದ ಅವುಗಳನ್ನು ನಿಪಿ 1 (ಎ) ಹಾಗೂ (ಬಿ) ಎಂದು, ಸದರಿ ಪತ್ರವನ್ನು ಬಿಕ್ಲಂ ದಾರರಾದ ಶಿವಕುಮಾರ್ ಇವರು ಬರೆದಿರುತ್ತಾರೆ. ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 1(ಸಿ) ಎಂದು, ಸಾಕ್ಷಿ ಮುಂದುವರೆದು ನಿಪಿ 1 ಕ್ಕೆ ಪ್ರತಿವಾದಿಗಳು ಸಹಿ ಮಾಡಿರುತ್ತಾರೆ ಎಂದು ಹೇಳಿ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 1(ಡಿ) ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಪ್ರತಿವಾದಿಯರು ಏಕಪಕ್ಷಿಯರಾಗಿರುವುದರಿಂದ ಪಾಟೀ ಸವಾಲು ಇರುವುದಿಲ್ಲ.

ಮರುವಿಚಾರಣೆ ಇರುವುದಿಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ ಎಂ

(ಗಾಯತ್ರಿ)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ